O.S .No. 63/2012

ಪಿ.ಡಬ್ಲ್ಯೂ-1

ದಿನಾಂಕ: 04.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಡಿ.ಎ. ವಕೀಲರಿಂದ

ನಿಪಿ-24 ದಾಖಲಾತಿ ದಾವೆ ಹೂಡುವ ಪೂರ್ವದ್ದು ಎಂದರೆ ಸರಿ. ನಿಪಿ-24 ನ್ನು ಈ ಹಿಂದೆ ನಿಮ್ಮ ಮುಖ್ಯ ವಿಚಾರಣೆಯ ಸಮಯದಲ್ಲೇ ಹಾಜರುಪಡಿಸಬಹುದಿತ್ತು ಎಂದರೆ ಸಾಕ್ಷಿ ಕೊಡಬಹುದಿತ್ತು, ನಿಗ ಬರಲಿಲ್ಲ ಎಂದು ಹೇಳುತ್ತಾರೆ. ಸುಮಾರು 15 ವರ್ಷ ಕಳೆದ ನಂತರ ನಿಪಿ-24 ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಿ ಎಂದರೆ ಸರಿ. ನಿಪಿ-24 ರಂತೆ ಎಂ.ಎ.ಜಿ.110/2007 ರಲ್ಲಿ ನೀವು ಹಾಗೂ ನಿಮ್ಮ ಅಣ್ಣ ಗೋಪಾಲನಾಯಕ ಆರೋಪಿತರು ಎಂದರೆ ಸರಿ.

ನೀವು ಪ್ರತಿವಾದಿಗಳ ಮೇಲೆ ಆಗಾಗ ಗಲಾಟೆ ಮಾಡುತ್ತಿದ್ದುದ್ದರಿಂದ, ನಿಮ್ಮಗಳ ಮೇಲೆ ಸದರಿ ಪ್ರಕರಣ ದಾಖಲಾಗಿತ್ತು ಎಂದರೆ ಸಾಕ್ಷಿ ಪ್ರತಿವಾದಿಗಳೇ ನಮ್ಮ ಮೇಲೆ ತಿರುಗಾಡುವ ರಸ್ತೆಯ ಸಂಬಂಧ ಗಲಾಟೆ ಮಾಡುತ್ತಿದ್ದರು ಎಂದು ಹೇಳುತ್ತಾರೆ. ನಿಮಗೆ ರಸ್ತೆಯಲ್ಲಿ ಓಡಾಡಲು ಹಕ್ಕು ಇದ್ದಿದ್ದರೆ ನಿಪಿ-24 ರಂತೆ ಪ್ರಕರಣ ದಾಖಲಾಗುತ್ತಿರಲಿಲ್ಲ ಎಂದರೆ ಸಾಕ್ಷಿ ನನಗೆ ಓಡಾಡಲು ಹಕ್ಕು ಇದೆ, ಪ್ರಕರಣದ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಪಿ-24 ರಂತೆ ಪ್ರಕರಣವನ್ನು ಸಾರ್ವಜನಿಕರಿಗೆ ತೊಂದರೆ ಕೊಡಬಾರದೆಂಬ ಉದ್ದೇಶದಿಂದ ನಿಮ್ಮ ಮೇಲೆ ಹೂಡಲಾಗಿತ್ತು ಎಂದರೆ ಸಾಕ್ಷಿ ಪ್ರತಿವಾದಿಗಳು ತೊಂದರೆ ಕೊಡಬಾರದು ಎಂಬ ಕಾರಣಕ್ಕಾಗಿ ಎಂದು ಹೇಳುತ್ತಾರೆ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.